

## ಮನೆಮುಂದಿಯ ಮುಂದೆ ಮುತ್ತು ಕೇಳಬಹುದೆ?

ಕಲರ್ಸ್ ಕನ್ನಡದ 'ರಾಮಾಚಾರಿ' ಹಳಿ ತಪ್ಪುತ್ತಿರುವಂತೆ ಕಾಣಿಸುತ್ತಿದೆ. ರಾಮಾಚಾರಿ ಆಫೀಸ್ ಬಾಸ್‌ನನ್ನು ಬಫೂನಿನಂತೆ ಚಿತ್ರಿಸುವುದನ್ನು ನಿಲ್ಲಿಸುವಂತೆ ಕಾಣುತ್ತಿಲ್ಲ. ತನ್ನ ಆಫೀಸಿನ ಕೆಲಸ ಬಿಟ್ಟು ರಾಮಾಚಾರಿ ಚಾರು ಮದುವೆ, ಅದರ ಸಂಭ್ರಮವೇ ಅವನಿಗೆ ಹೆಚ್ಚು ಆಸಕ್ತಿ ಇರುವಂತೆ ತೋರುತ್ತಿದೆ. ಚಾರು ಪ್ರೀತಿಸುತ್ತಿದ್ದಂತೆ ಆತ ಕನಸು ಕಾಣುತ್ತಾನೆ, ಅದಕ್ಕೊಂದು ಹಿನ್ನೆಲೆ ಗೀತೆ. ಇತ್ತ ಚಾರುವಿನ ನಡತೆ ಅತಿರೇಕಕ್ಕೆ ಹೋಗುತ್ತಿದೆ. ಮನೆಯ ಹಿರಿಯರ ಮುಂದೆ ರಾಮಾಚಾರಿಗೆ ಮುತ್ತು ಕೊಡು ಎಂದು ಕೇಳುವುದಕ್ಕೆ ಅರ್ಥವಿದೆಯೆ? ಗಂಭೀರವಾಗಿದ್ದ 'ರಾಮಾಚಾರಿ' ಜಾಡು ತಪ್ಪುತ್ತಿದೆ.

—ಮುರಲೀಧರ ಕುಲಕರ್ಣಿ, ಬೀದರ್

## ಅಡಿಗಡಿಗೂ ಕುಟುಕು ನಡೆ ಸರಿಯಲ್ಲ

ಸಿರಿ ಕನ್ನಡದ 'ಮತ್ತೆ ಮಾಯಾಮೃಗ'ದಲ್ಲಿ ರಘುನಂದನ್ ಕೆಲಸವೂ ಇಲ್ಲದೆ ಹಣದ ಆಸರೆಯೂ ಇಲ್ಲದೆ ಅನಾಥ ಪ್ರಜ್ಞೆಯಿಂದ ಯೋಗ ಹೇಳಿಕೊಡುವ ಬಗ್ಗೆ ಯೋಚಿಸುತ್ತಾನೆ. ಆದರೆ, ಹೆಂಡತಿ ಶ್ರೀಲಕ್ಷ್ಮಿ ಗಂಡನನ್ನು ಹೀನಾಯವಾಗಿ ಕಾಣುವುದು, ಪ್ರತಿ ಹೆಜ್ಜೆಗೂ ಕುಟುಕುವುದು, ಮನೆಯಲ್ಲಿ ಯೋಗ ಹೇಳಿಕೊಡುವುದು ಬೇಡ ಅಂತ ತಾಕೀತು ಮಾಡುವುದು ಸರಿ ಕಾಣಲಿಲ್ಲ. ಮಾಡಿದ ತಪ್ಪನ್ನು ತಿದ್ದಿಕೊಂಡ ಮೇಲೂ ಈ ರೀತಿ ಮಾಡುವುದು ಎಷ್ಟು ಸರಿ?

—ಭಾರತೀ ಗಂಗಾಧರ್, ಬೆಂಗಳೂರು

## ಮನಸಿಟ್ಟು ಮಾಡಿದರೆ 'ಬೊಂಬಾಟ್'

ಸ್ಟಾರ್ ಸುವರ್ಣದಲ್ಲಿ ಸಿಹಿಕಹಿ ಚಂದ್ರು ನಡೆಸಿಕೊಡುವ 'ಬೊಂಬಾಟ್ ಭೋಜನ' ಬೊಂಬಾಟಾಗಿ ಬರುತ್ತಿದೆ. ಬೆಂಗಳೂರಿನ ಬಸವೇಶ್ವರನಗರದ ಧಾರಿಣಿ ಮಹಿಳಾ ಸಂಘ ಕಚೇರಿಯಿಂದ ಮೂಡಿಬಂದ ಇತ್ತೀಚಿನ ಮೂರು ಸಂಚಿಕೆಗಳು ಖುಷಿ ನೀಡಿದವು. ಚಂದ್ರು ಅವರ ಹಾಸ್ಯಭರಿತ ಮಾತುಗಳು ಎಂದಿನಂತೆ ಚೆನ್ನಾಗಿದ್ದವು. ತಮಿಳುನಾಡಿನ 'ಕೊಳಂಬು' ಎಂಬ ರುಚಿಕಟ್ಟಾದ ಖಾದ್ಯವನ್ನು ಕೆಲವೇ ನಿಮಿಷಗಳಲ್ಲಿ ತಯಾರಿಸಿದ್ದು, ಅಡುಗೆಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರ ನೀಡಿದ ರೀತಿ ಇಷ್ಟವಾಯಿತು. ಮನಸ್ಸಿಟ್ಟು ಮಾಡಿದ ಅಡುಗೆ ನಿಜಕ್ಕೂ ರುಚಿಯಾಗಿರುತ್ತದೆ ಎಂಬ ಅಂಶವನ್ನು ಚಂದ್ರು ಮನವರಿಕೆ ಮಾಡಿಕೊಟ್ಟರು.

—ಕಾತ್ಯಾಯನಿ ಅನಿಲ್, ಬೆಂಗಳೂರು

ವಾರದ ಪತ್ರ

## ವಿಕ್ರಮ ಬೇತಾಳನ ಹೊಸ ಕಥೆ

'ರಾಜನ್, ನಿನ್ನ ವ್ಯರ್ಥ ಪ್ರಯತ್ನ ಮತ್ತು ಸಹನೆ ಮೆಚ್ಚುಗೆಗೆ ಅರ್ಹವಾದುದು. ಮಾರ್ಗ ಮಧ್ಯದಲ್ಲಿ ನಿನಗೆ ಆಯಾಸ ಆಗದೇ ಇರಲಿ ಎಂದು ಒಂದೆರಡು ಕಥಾ ಪ್ರಸಂಗಗಳನ್ನು ಹೇಳುತ್ತೇನೆ. ಅತ್ತೆ, ಸೊಸೆ, ನಾದಿನಿ, ಅಮ್ಮ, ಅತ್ತಿಗೆ, ಗೆಳತಿ ಎಂಬ ಸಂಬಂಧಗಳಿಗೆ ಕಪ್ಪುಚುಕ್ಕೆಯಂತಿರುವ ವ್ಯಕ್ತಿತ್ವಗಳು ಕಿರುತೆರೆಯ ಮೇಲೆ ಅಟ್ಟಹಾಸ ಮೆರೆಯುತ್ತಿದ್ದಾರೆ. ಇಲ್ಲಿ ಗಂಡಸರು ತ್ರಿಶಂಕು ಸ್ಥಿತಿಯಲ್ಲಿ ಸುಖಾಸುಮ್ಮನೆ ಹಾರಾಡುತ್ತಾರೆ. ಈಗ ನಿನಗೊಂದು ಪ್ರಶ್ನೆ ಕೇಳುತ್ತೇನೆ. ಇಷ್ಟೆಲ್ಲಾ ಆದರೂ ಮೂಕ ಪ್ರೇಕ್ಷಕನ ಪಾಡು ನೋಡಿ ನಿನಗೆ ಏನನಿಸುತ್ತದೆ? ಉತ್ತರ ಗೊತ್ತಿದ್ದೂ ಹೇಳದೇ ಹೋದರೆ ನಿನ್ನ ತಲೆ ಗಟ್ಟಿ ಮೇಳದ ಶಬ್ದಕ್ಕೆ ಸಿಡಿದು ಹೋಗುವಂತೆ ಆದೀತು!' ಎಂದು ರಾಜ ಉತ್ತರ ಹೇಳುವ ಮೊದಲೇ ಥಟ್ ಅಂತಾ ಮರದ ಮೇಲೆ ನೇತಾಡತೊಡಗಿತು.

ಮೇಲಿನ ಬೇತಾಳ ಪ್ರಸಂಗ ನನ್ನ ಮನಸ್ಸಿನಲ್ಲಿ ಸುಳಿದಿದ್ದು ಕಿರುತೆರೆಯ 'ರಾಮಾಚಾರಿ', 'ಗಟ್ಟಿ ಮೇಳ', 'ನಮ್ಮ ಲಚ್ಚಿ', 'ಗೀತಾ', 'ಪಾರು', 'ತ್ರಿಪುರ ಸುಂದರಿ' ಧಾರಾವಾಹಿಗಳ ಖಳ ನಾಯಕಿಯರ ತಂತ್ರ ಕುತಂತ್ರಗಳನ್ನು ನೋಡಿದಾಗ!

—ಆರ್. ವೀರೇಶ್ ಕುಮಾರ್, ಬೆಂಗಳೂರು

## ವಲಸೆಯಿಂದ ಅಸಲಿ ಮನರಂಜನೆಗೆ ಪೆಟ್ಟು

ವರ್ಷದಿಂದ ಪ್ರಸಾರವಾಗುತ್ತಿರುವ ಕೆಲವು ಧಾರಾವಾಹಿಗಳು ದಿಢೀರ್ ಅಂತ್ಯ ಕಾಣುತ್ತಿವೆ. ಕೆಲವು ತಾರ್ಕಿಕ ಅಂತ್ಯ ಕಾಣದೇ ತೆರೆ ಎಳೆಯುತ್ತಿವೆ. ಧಾರಾವಾಹಿಗಳು ಮೊದಲಿನ ಆಕರ್ಷಣೆ ಮತ್ತು ಕುತೂಹಲವನ್ನು ಉಳಿಸಿಕೊಂಡಂತೆ ಕಾಣುವುದಿಲ್ಲ. ತಮ್ಮ ಅಭಿನಯದಿಂದ ವರ್ಷಗಳ ಕಾಲ ವೀಕ್ಷಕರನ್ನು ರಂಜಿಸಿದ ಕೆಲವು ಕಲಾವಿದರು ಕಾಣುತ್ತಿಲ್ಲ. ಹೊಸಬರು ಅವರ ಸ್ಥಳವನ್ನು ತುಂಬಬಹುದು ಅನಿಸುತ್ತಿಲ್ಲ. ಹೊಸ ಧಾರಾವಾಹಿಗಳು ಜನಮನ ಗೆಲ್ಲಲು ಸಮಯ ಬೇಕಾದರೂ, ಬೆಳೆಯ ಸಿರಿ ಮೊಳಕೆಯಲ್ಲಿ ಎನ್ನುವಂತೆ ಆರಂಭಗಳು ವೀಕ್ಷಕರನ್ನು ಆಕರ್ಷಿಸುತ್ತಿಲ್ಲ. ವಿಚಿತ್ರವೆಂದರೆ, ಕನ್ನಡದ ಬಹುತೇಕ ಕಿರುತೆರೆ ಕಲಾವಿದರು ಪರಭಾಷೆಗಳಿಗೆ ವಲಸೆಹೋಗಿ ಜನಪ್ರಿಯರಾಗುತ್ತಿದ್ದರೆ, ಪರಭಾಷಾ ಧಾರಾವಾಹಿಗಳು ಕನ್ನಡಕ್ಕೆ ಡಬ್‌ಆಗಿ ರೇಟಿಂಗ್ ಹೆಚ್ಚಿಸಿಕೊಳ್ಳುತ್ತಿವೆ.

—ರಮಾನಂದ ಶರ್ಮಾ, ಬೆಂಗಳೂರು

## ಕಿರುತೆರೆಯಲ್ಲಿ ಆ್ಯಕ್ಷನ್ ಸೆಳೆತಕ್ಕೆ ಮಿತಿಯಿರಲಿ

ಧಾರಾವಾಹಿ ಎಂದರೆ ಮಹಿಳಾ ಪ್ರಧಾನ ಕುಟುಂಬದ ಕಥೆ, ಮಹಿಳಾ ಪಾತ್ರಗಳ ಸುತ್ತಲೇ ಸುತ್ತುವ ಮತ್ತು ಗೃಹಿಣಿಯರನ್ನು ಆಕರ್ಷಿಸುವ ಸನ್ನಿವೇಶಗಳು ಇರುತ್ತಿದ್ದ ಪರಿಕಲ್ಪನೆಗೆ ಹೊಸತನ ಸೇರಿಕೊಂಡಂತಿದೆ. ಇತ್ತೀಚೆಗೆ ಸಾಹಸ ಸನ್ನಿವೇಶಗಳೂ ಶುರುವಾಗಿವೆ. ಕೆಲವು ಧಾರಾವಾಹಿಗಳಲ್ಲಿ ನಾಯಕಿಯೂ ಹೊಡೆದಾಟ ಮಾಡುತ್ತಿದ್ದಾಳೆ. ಸಾಹಸ ದೃಶ್ಯಕ್ಕೆ ಹೆಚ್ಚಿನ ಮುತುವರ್ಜಿ ವಹಿಸಲಾಗುತ್ತಿದೆ. ಪ್ರೀತಿ, ಪ್ರೇಮದ ಹೊರತಾಗಿ ಸಾಹಸ ಸನ್ನಿವೇಶಗಳಲ್ಲಿ ಕಾಣಿಸಿಕೊಳ್ಳಬೇಕು ಎಂಬ ನಾಯಕರ ಕನಸಿಗೆ ಇದು ಸಹಾಯವಾಗುತ್ತದೆ. ಮಕ್ಕಳಿಗೆ ಇಂತಹ ದೃಶ್ಯಗಳು ಪ್ರಿಯವಾಗುತ್ತವೆ. ಆದರೂ ಸಾಹಸಗಳನ್ನು ಕಡಿಮೆ ಮಾಡಿ ಲೇಖಕಿಯರ ಸಾಮಾಜಿಕ ಕಥೆಗಳನ್ನು ಆಧರಿಸಿ ಧಾರಾವಾಹಿ ರೂಪಿಸುವ ಪ್ರಯತ್ನ ಮಾಡಲಿ.

—ವೀಣಾ ಶಂಕರ್, ಬೆಂಗಳೂರು

## ಜ್ಯೋತಿಷ್ಯದಲ್ಲಿ ವೈದ್ಯಕೀಯ ವಿಜ್ಞಾನ

ಝೀ ಕನ್ನಡದ 'ಮಹರ್ಷಿ ವಾಣಿ' ಕಾರ್ಯಕ್ರಮದಲ್ಲಿ ಸ್ವರ ಜ್ಯೋತಿಷ್ಯ ಅನ್ನೋ ವಿಭಾಗಕ್ಕೆ ಮಹಿಳೆಯೊಬ್ಬರು ಕರೆ ಮಾಡಿ 'ತಾನು ಬೆನ್ನು ನೋವಿನಿಂದ ಬಳಲುತ್ತಿದ್ದೇನೆ. ವೈದ್ಯರು ಶಸ್ತ್ರಚಿಕಿತ್ಸೆಗೆ ಸಲಹೆ ನೀಡಿದ್ದರು. ಕೆಲವರು ನಿಮಗೆ ಮಾಟ ಮಾಡಿಸಿದ್ದಾರೆ ಅಂತ ಹೇಳುತ್ತಿದ್ದಾರೆ, ಇದಕ್ಕೆ ಪರಿಹಾರ ತಿಳಿಸಿ' ಎಂದು ಕೇಳಿಕೊಂಡರು. ಮಾಟ–ಮಂತ್ರ ಸಮಸ್ಯೆ ಖಂಡಿತ ಅಲ್ಲ ತಾಯಿ, ಬೆನ್ನುನೋವಿನ ಸಮಸ್ಯೆಗೆ ನೀವು ವೈದ್ಯರ ಅಭಿಪ್ರಾಯವನ್ನು ಪಡೆದುಕೊಳ್ಳಿ. ಖಂಡಿತ ಬೆನ್ನುನೋವಿನ ಶಮನಕ್ಕೆ ಪರಿಹಾರ ಸಿಕ್ಕೇ ಸಿಗುತ್ತದೆ ಎಂದು ಗುರೂಜಿ ಸೂಚಿಸಿದರು. ಇಂಥ ವೈಜ್ಞಾನಿಕ ಪರಿಹಾರದ ನುಡಿಗಳು ಚೇತೋಹಾರಿ ಎನಿಸಿತು.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ಮೂರ್ಖರು ಯಾರು?

ಧಾರಾವಾಹಿಯ ಕಥೆಯನ್ನು ಹೀಗೂ ಎಳೆಯಬಹುದು ಎನ್ನುವುದಕ್ಕೆ ಕಲರ್ಸ್ ಕನ್ನಡದ 'ಗೀತಾ' ನಿದರ್ಶನ. ಇಂದಿನ ಡಿಜಿಟಲ್ ಯುಗದಲ್ಲಿ ಪದೇ ಪದೇ ಚಳ್ಳೆಹಣ್ಣು ತಿನ್ನಿಸುವ ಭಾನುಮತಿಗೆ ಬುದ್ಧಿವಂತರಾದ ಗೀತಾ, ಚಂದ್ರಿಕಾ, ಸುಧಾರಾಣಿ ಅವರಿಗೆ ಅವಳ ಮಾತುಗಳನ್ನು ಸೆರೆಹಿಡಿಯುವ ಉಪಾಯ ಹೊಳೆಯದಿರುವುದು ಹಾಸ್ಯಾಸ್ಪದ ಎನ್ನಿಸುವುದಿಲ್ಲವೇ? ವೀಕ್ಷಕ ಇಂತಹ ಕಥೆಗಳಿಂದ ದೂರ ಸರಿಯುವ ದಿನಗಳು ಸನಿಹದಲ್ಲಿಯೇ ಇರುವುದು ಧಾರಾವಾಹಿ ರೂಪಿಸುವವರಿಗೆ ಗೊತ್ತಾಗುವುದಿಲ್ಲವೇ?

—ಪ್ರಕಾಶ್ ಮಲ್ಕಿಒಡೆಯರ್, ಹೂವಿನಹಡಗಲಿ